

# ಮುಳುಗುವ ಕೋರ

■ ನಾಗೇಶ್‌ಕುಮಾರ್ ಸಿ.ಎಸ್.

## 'ನಮ್ಮಕ್ಕ ದೇವತೆಯಂತೆ!'

ಸ್ವಲ್ಪ ಮಧ್ಯಮವರ್ಗದವರೇ ವಾಸಿಸುವ ಕಂಚಿ ನೆಲೆಸಿದ್ದ ಪಟೇಲ್ ನಗರ ಎಂಬ ಬಡಾವಣೆ ತಲುಪಿದಾಗ ಪ್ರತಿ ರಸ್ತೆಯಲ್ಲೂ ಬೇಸಿಗೆ ರಜದಲ್ಲಿದ್ದ ಹುಡುಗರ ಕ್ರಿಕೆಟ್ ಆಟದ ಗೊಂದಲ ಕಂಡು ಬಂದಿತು. ಅದರ ಮಧ್ಯೆ ಎಚ್ಚರಿಕೆಯಿಂದ ಕಾರ್ ನಡೆಸಿ ಬ್ರೌನ್ ಬಣ್ಣದ ಮಳೆ ನೀರಿನ ಸೋರಿಕೆಯಿಂದ ಪಾಚಿ ಕಟ್ಟಿದ್ದ ಬಿಲ್ಡಿಂಗ್ ಒಂದರ ಮುಂದೆ ರಸ್ತೆಯಲ್ಲೇ ಕಾರ್ ನಿಲ್ಲಿಸಿದ ಕಂಚಿ ಮತ್ತು ಅಂಚಿಯರ ಜೀವನ ಶೈಲಿಯಲ್ಲಿ ಎಷ್ಟು ವ್ಯತ್ಯಾಸ ಎಂಬುದು ಕಣ್ಣಿಗೇ ಬಡಿಯುವಂತಿತ್ತು.

ಅಲ್ಲಿ ಯಾರೂ ಕಾರು ನೋಡಿಕೊಳ್ಳುವವರಿಲ್ಲವೆಂದು ಅರಿಯಲು ಹೆಚ್ಚು ಹೊತ್ತೇನೂ ವ್ಯಯ ಮಾಡಲಿಲ್ಲ ಪತ್ತೇದಾರ. ದೂರದಲ್ಲಿ ಅಚ್ಚರಿಯಿಂದ ಇವನನ್ನೇ ಪಿಳಿಪಿಳಿ ನೋಡುತ್ತಿದ್ದ ಕ್ರಿಕೆಟ್ ನಿಲ್ಲಿಸಿದ್ದ ಹುಡುಗರಲ್ಲಿ ಎತ್ತರದವನೊಬ್ಬನನ್ನು ಸಿಳ್ಳೆ ಹಾಕಿ ಹತ್ತಿರ ಕರೆದ, ತಾನೂ ಸ್ನೇಹಪರ ಎಂದು ತೋರ್ಪಡಿಸಲು. ಅವನನ್ನೇ ನೋಡುತ್ತಾ ಬಳಿಗೆ ಬಂದ ಮೋಹಾಕ್ ಹೇರ್ ಕಟ್ ಮಾಡಿದ್ದ ಹಳದಿ 'ಸಿ ಎಸ್ ಕೆ' ಎಂಬ ಬರಹವಿದ್ದ ಟೀ ಶರ್ಟ್ ಧರಿಸಿದ್ದವನಿಗೆ ಹೇಳಿದ: 'ಈ ಕಾರಿಗೆ ಯಾರಿಂದಲೂ ಅಪಾಯವಾಗದಂತೆ ನೋಡಿಕೊಂಡರೆ ನಿನಗೆ ಗಂಟೆಗೆ ಮೂವತ್ತು ರೂಪಾಯಿ.. ಹೇಗೆ ನೋಡ್ಕೋತೀಯಾ ಅನ್ನೋದು ನಿನಗೆ ಬಿಟ್ಟಿದ್ದು'.

'ಸಾರ್ ಇಲ್ಲಿದೆ ನೋಡಿ, ಸಾಕು ಇವ್ರಿಗೆ' ಎಂದು ತನ್ನ ಎಂ.ಆರ್.ಎಫ್ ಬ್ಯಾಟನ್ನೇ ಭೀಮನ ಗಧೆಯಂತೆ ಉಪಯೋಗಿಸಿ ಭುಜದ ಮೇಲೆ ಸುತ್ತಿಸಿ ಮಿಕ್ಕ ಹುಡುಗರತ್ತ 'ಏಯ್!' ಎಂದು ಬೆದರಿಕೆ ಕಣ್ಣು ಹಾಕುತ್ತಾ ನಡೆದ. ಅವನ ಭಂಗಿಯನ್ನು ಕಂಡು ಮುಗುಳ್ನಕ್ಕ ಕೀರ್ತಿಮಾನ್ ಇನ್ನು ತನ್ನ ಕಾರ್ ಸುರಕ್ಷಿತವೆನಿಸಿತು.

ಲಿಫ್ಟ್ ಔಟ್ ಆಫ್ ಆರ್ಡರ್ ಎಂದು ಬೋರ್ಡ್ ಹಾಕಿದ್ದರಿಂದ ನಿದ್ದೆ ಹೊಡೆಯುತ್ತಾ ಚೇರಿನಲ್ಲಿ ಕುಳಿತಿದ್ದ ವಯಸ್ಸಾದ ಸೆಕ್ಯುರಿಟಿ ಗಾರ್ಡ್ ಅನ್ನು ದಾಟಿ ಮೆಟ್ಟಿಲ ಬಳಿಗೆ ನಡೆದ. ಅರ್ಧ ಕಣ್ಣು ತೆರೆದು ಆ ಗಾರ್ಡ್ ಇವನತ್ತ ನೋಡಿ, ಏನೂ ಹಾನಿಯಿಲ್ಲ ಎಂದು ತೀರ್ಮಾನಿಸಿ ಮತ್ತೆ ನಿದ್ದೆಗೆ ಜಾರಿದ.

ಆ ಸೆಕೆಯಲ್ಲಿ ಎರಡನೇ ಫ್ಲೋರ್ ಹತ್ತಿ ಉಸ್ಸೆಂದು ನಿಟ್ಟುಸಿರಿಟ್ಟು